ಪ. ರಾಮಕೃಷ್ಣ ಶಾಸ್ತ್ರಿ

# ಪ್ರಾಮಾಣಿಕತೆ ದೊಡ್ಡದು

ಒಂದು ಹಳ್ಳಿಯಲ್ಲಿ ತಿಮ್ಮನೆಂಬ ಬಡ ಹುಡುಗನಿದ್ದ. ಅವನ ತಾಯಿ ಸಾಯುವಾಗ ಮಗನನ್ನು ಬಳಿಗೆ ಕರೆದು, 'ಚಿಕ್ಕಂದಿನಲ್ಲೇ ನಿನ್ನ ತಂದೆ ತೀರಿಕೊಂಡರು. ಬಹಳ ಕಷ್ಟಪಟ್ಟು ನಿನ್ನನ್ನು ಬೆಳೆಸಿದ್ದೇನೆ. ನಿನಗೆಂದು ಕೊಟ್ಟು ಹೋಗಲು ನನ್ನಲ್ಲಿ ಯಾವ ಆಸ್ತಿಯೂ ಇಲ್ಲ. ಆದರೆ, ಪ್ರಾಮಾಣಿಕತೆಯನ್ನು ಎಂದಿಗೂ ಬಿಡಬೇಡ. ಇದು ನಿನಗೆ ದೊಡ್ಡ ಆಸ್ತಿಯಾಗುತ್ತದೆ' ಎಂದು ಹೇಳಿ ಕಣ್ಣು ಮುಚ್ಚಿದಳು.

ತಿಮ್ಮ ಏನಾದರೂ ಕೆಲಸ ಸಿಗುತ್ತದೋ ಎಂದು ಹುಡುಕಿಕೊಂಡು ಮನೆಯಿಂದ ಹೊರಟ. ಒಂದೆಡೆ ಶ್ರೀಮಂತ ರೈತನೊಬ್ಬ ಬಗೆಬಗೆಯ ಹಣ್ಣಿನ ಮರಗಳಿರುವ ತನ್ನ ತೋಟವನ್ನು ಕಾವಲು ಕಾಯಲು



ಕಲೆ: ಗಣೇಶ ಆಚಾರ್ಯ